**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001**

ಸನಿ(ಶಾ.ಶಿ)ಶಾಲಾ ಪೋಷಣೆ/2012-13 ದಿನಾಂಕ: 12-6-2012

**ಸುತ್ತೋಲೆ**

ವಿಷಯ: ಶಾಲೆಗಾಗಿ ನಾವು-ನೀವು 2012ರ ಅಡಿಯಲ್ಲಿ ಕಲಿಕೆಯ ಸಬಲೀಕರಣಕ್ಕಾಗಿ ಶಿಕ್ಷಣ ಸಂಚಲನ/ಶಿಕ್ಷಣದ ಹಕ್ಕು ಆಂದೋಲನ ಕುರಿತು.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ159ಎಂ.ಸಿ.ಡಿ2011 ದಿನಾಂಕ:18.06.2011.

****

ದಿನಾಂಕ: 04.07.2012 ರಿಂದ 31.07.2012 ರವರೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ಎಲ್ಲಾ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆಗಳಲ್ಲಿ ಒಂದು ಆಂದೋಲನ ರೂಪದಲ್ಲಿ ಶಾಲೆಗಾಗಿ ನಾವು-ನೀವು ಕಾರ್ಯಕ್ರಮವನ್ನು ಈ ವರ್ಷ ಹಮ್ಮಿಕೊಳ್ಳಲು ಇಲಾಖೆ ನಿರ್ಧರಿಸಿದೆ. ಈ ಕಾರ್ಯಕ್ರಮಕ್ಕೆ ಸನ್ಮಾನ್ಯ ಮುಖ್ಯ ಮಂತ್ರಿಯವರಿಂದ ಹಿಡಿದು ಗ್ರಾಮ ಪಂಚಾಯಿತಿ ಸದಸ್ಯರವರೆಗಿನ ಎಲ್ಲಾ ಹಂತದ ಜನಪ್ರತಿನಿಧಿಗಳು; ಎಲ್ಲಾ ಇಲಾಖೆಯ ಎಲ್ಲಾ ಸ್ತರದ ಅಧಿಕಾರಿಗಳು ; ಮತ್ತು ಶಿಕ್ಷಣ ಇಲಾಖೆಯ ಆಯುಕ್ತರಿಂದ ಹಿಡಿದು ಗುಚ್ಚ ಸಂಪನ್ಮೂಲ ವ್ಯಕ್ತಿವರೆಗೂ(ಸಿ.ಆರ್.ಪಿ) ಎಲ್ಲಾ ಹಂತದ ಮೇಲುಸ್ತುವಾರಿ ಅಧಿಕಾರಿಗಳು ಜಿಲ್ಲೆಗಳಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂಬ ಆಶಯವನ್ನು ಪ್ರಸ್ತುತ ಕಾರ್ಯಕ್ರಮ ಹೊಂದಿದೆ.

**ಕಾರ್ಯಕ್ರಮದ ಉದ್ದೇಶಗಳು**

1. ಮಕ್ಕಳ ಶಿಕ್ಷಣ ಹಕ್ಕು ಕುರಿತಂತೆ ಸಮುದಾಯದಲ್ಲಿ ಜಾಗೃತಿ ಮೂಡಿಸುವುದು. ಸರ್ಕಾರ ನೀಡುವ ಉತ್ತೇಜಕಗಳು ಫಲಾನುಭವಿಗಳಿಗೆ ತಲುಪಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.
2. ಪ್ರಸ್ತುತ 2ನೇ ತರಗತಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ಸ್ಥೂಲವಾಗಿ ಗುರುತಿಸಿ ದಾಖಲಿಸುವುದು ಹಾಗೂ ಫಲಿತಾಂಶಗಳನ್ನು ಆಧರಿಸಿ ಕಾರ್ಯಾನುಸರಣೆ ಮಾಡುವುದು.
3. ಶಾಲೆಗಳ ಎಲ್ಲಾ ವಿಶಿಷ್ಠ ಚಟುವಟಿಕೆಗಳ ಗುಣಮಟ್ಟದ ಉಸ್ತುವಾರಿ ಮಾಡುವುದು.
4. ಸಮುದಾಯ/ದಾನಿಗಳನ್ನು ಪ್ರೇರೇಪಿಸಿ ಅವರಿಂದ ಶಾಲೆಯ ಅಭಿವೃದ್ದಿಗೆ ಕೊಡುಗೆಯನ್ನು ಪಡೆಯುವುದು. ತನ್ಮೂಲಕ ಶಾಲೆಯ ಭೌತಿಕ, ಶೈಕ್ಷಣಿಕ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು.
5. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರ್ತಿಸಿ ಅವರನ್ನು ಶಾಲೆಗೆ ತರುವಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಎಸ್.ಡಿ.ಎಂ.ಸಿ, ಹಳೆಯ ವಿದ್ಯಾರ್ಥಿಗಳು, ಸ್ಥಳೀಯ ಮುಖಂಡರು ಮತ್ತು ಅಧಿಕಾರಿಗಳು ತೊಡಗುವಂತೆ ಮಾಡುವುದು.

**ಕಾರ್ಯಕ್ರಮದ ಸ್ವರೂಪ**

ಪ್ರಸ್ತುತ ಕಾರ್ಯಕ್ರಮವು 05 ಪ್ರಧಾನ ಹಂತಗಳನ್ನು ಹೊಂದಿದೆ.

✓ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಂದ ದಿನಾಂಕ:04-07-2012ರಂದು ಶಾಲೆಗಾಗಿ ನಾವು-ನೀವು ಕಾರ್ಯಕ್ರಮದ ಬಗ್ಗೆ ಮಾಧ್ಯಮಗೋಷ್ಠಿ.

- ✓ ಶಾಲೆಗಾಗಿ ನಾವು ನೀವು ಕಾರ್ಯಕ್ರಮದ ಅನುಷ್ಠಾನ – 05-07-12ರಂದು (ಎಲ್ಲಾ ಸರ್ಕಾರಿ ಶಾಲೆಗಳಲ್ಲಿ)
- ✓ ಎಲ್ಲಾ ಹಂತದ ಅಧಿಕಾರಿಗಳ ತಂಡದಿಂದ ಶಾಲೆಗಳ ಸಂಕ್ಷಿಪ್ತ ಮೌಲ್ಯಮಾಪನ– 06-07-12 ರಿಂದ 31-07-2012(ಎಲ್ಲಾ ಸರ್ಕಾರಿ ಶಾಲೆಗಳಲ್ಲಿ)
- ✓ ನಿರಂತರ ಕಾರ್ಯಾನುಸರಣೆ – 16-08-12 ರಿಂದ 15-01-13 (ಎಲ್ಲಾ ಸರ್ಕಾರಿ ಶಾಲೆಗಳಲ್ಲಿ)
- ✓ ಎಸ್.ಡಿ.ಎಂ.ಸಿ/ಸಮುದಾಯ/ಅಧ್ಯಾಪಕರ ಸಮಾವೇಶ – 16-01-13 ರಇಂದ 31-01-13 (ಬ್ಲಾಕ್ ಹಂತದಲ್ಲಿ/ಸ್ಥಳೀಯವಾಗಿ)

**✓ಶಾಲೆಗಾಗಿ ನಾವು ನೀವು ಸಮಾರಂಭದ ರೂಪ ರೇಷೆಗಳು.**

- **ಪ್ರಚಾರ ಕಾರ್ಯ:** 05.07.12 ರಂದು ನಡೆಯುವ ಶಾಲೆಗಾಗಿ ನಾವು–ನೀವು ಕಾರ್ಯಕ್ರಮ ಕುರಿತು ಪ್ರಚಾರ ಮಾಧ್ಯಮಗಳಲ್ಲಿ ಮುಂಚಿತವಾಗಿಯೇ ರಾಜ್ಯ ಜಿಲ್ಲೆ ಮತ್ತು ತಾಲ್ಲೂಕು ಹಂತದಲ್ಲಿ ಪ್ರಚಾರ ಕಾರ್ಯ ಕೈಗೊಳ್ಳುವುದು. ವಿದ್ಯಾರ್ಥಿಗಳ ಮೂಲಕ ಅವರ ಪೋಷಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಾಹಿತಿ ನೀಡುವುದು. ಜನ ಪ್ರತಿನಿಧಿಗಳು ಅವರು ಇಚ್ಛಿಸುವ ಶಾಲೆಗೆ ಹಾಜರಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಯಾ ಹಂತದ ಅಧಿಕಾರಿಗಳು ಆಹ್ವಾನವನ್ನು ನೀಡಬೇಕು. ಎಲ್ಲಾ ಶಾಲೆಗಳು ಈ ಕಾರ್ಯಕ್ರಮದಲ್ಲಿ ಸೇರ್ಪಡೆಯಾಗುವಂತೆ ಆಯೋಜಿಸಬೇಕು.

- ▪ ಮುಖ್ಯೋಪಾಧ್ಯಾಯರು – ಗ್ರಾಮ ಪಂಚಾಯಿತಿ ಸದಸ್ಯರಿಗೆ.ಆಸಕ್ತ ಹಳೆಯ ವಿದ್ಯಾರ್ಥಿಗಳಿಗೆ.
- ▪ ಬಿ.ಇ.ಓ ಮತ್ತು ಟಿ.ಪಿ.ಇ.ಓ – ಗ್ರಾಮ ಪಂಚಾಯಿತಿ ಅಧ್ಯಕ್ಷರು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರಿಗೆ

- ಡಿ.ಡಿ.ಪಿ.ಐ ಮತ್ತು ಸಿ.ಇ.ಓ – ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರಿಗೆ
- **ಶಾಲೆಯೆಡೆಗೆ ಜಾಥಾ:** ತಾಲ್ಲೂಕು ಹಂತದಲ್ಲಿ ಗುರುತಿಸಿದ ಸ್ವಯಂ ಸೇವಕರು ; ಎಸ್.ಡಿ.ಎಂ.ಸಿ ಸದಸ್ಯರು; ಸಮುದಾಯದ ಶಿಕ್ಷಣಾಸಕ್ತರು, ಅಧ್ಯಾಪಕರು, ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಒಂದೆಡೆ ಕಲೆತು ಜಾಥಾ ಮಾದರಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಮನೆಗೆ ಹೋಗಿ ವಿದ್ಯಾರ್ಥಿ ಮತ್ತು ಅವರ ಪೋಷಕರ ಮನವೊಲೈಸಿ ಶಾಲೆಗೆ ಕರೆತರುವುದು. ಪ್ರಾರ್ಥನೆಗೆ ಮುನ್ನ ಈ ಚಟುವಟಿಕೆ ನಡೆಯಬೇಕು. ಪೋಷಕರು ಶಾಲೆಯಲ್ಲಿ ನಡೆಯುವ ಸಮಾರಂಭದಲ್ಲಿ ಪಾಲ್ಗೊಳ್ಳಲು ಇದೇ ಅವಧಿಯಲ್ಲಿ ಮತ್ತೊಮ್ಮೆ ತಿಳಿಸಬಹುದು.
- **ಶಾಲೆಯ ಪ್ರಾರ್ಥನೆ:** ಈ ಅವಧಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಸಮುದಾಯ,ಜನಪ್ರತಿನಿಧಿಗಳು, ಅಧಿಕಾರಿಗಳು, ಎಸ್.ಡಿ.ಎಂ.ಸಿಯವರು ಪಾಲ್ಗೊಳ್ಳುತ್ತಾರೆ.
- **ಸಮುದಾಯದಿಂದ ಪರಿವೀಕ್ಷಣೆ:** ಸಮುದಾಯ ಶಾಲೆಯಲ್ಲಿನ ಸೌಲಭ್ಯ ಮತ್ತು ಕುಂದುಕೊರತೆಗಳ ವಸ್ತುಸ್ಥಿತಿಯನ್ನು ಗಮನಿಸಿ ಅದರ ಉತ್ತಮಿಕೆಗೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಒಳನೋಟಗಳನ್ನು ಪಡೆಯಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಈಗಾಗಲೇ ಇಂತಹ ಕ್ರಮ ತ್ರೈಮಾಸಿಕವಾಗಿ ಎಸ್.ಡಿ.ಎಂ.ಸಿಯವರಿಂದ ಹಮ್ಮಿಕೊಳ್ಳಲಾಗಿದ್ದು, ಇದಕ್ಕೆ ಈ ಚಟುವಟಿಕೆ ಪೂರಕವಾಗಿದೆ.

ಇದಕ್ಕಾಗಿ ಸಂಕ್ಷಿಪ್ತ ಮೌಲ್ಯಮಾಪನದ ನಮೂನೆಯನ್ನು ತಯಾರಿಸಲಾಗಿದೆ. ಇದರಲ್ಲಿನ ಭಾಗ–02 ರ ಅಂಕಿ ಅಂಶಗಳನ್ನು ಇಂದು ಭಾಗವಹಿಸಿದ ಜನ ಪ್ರತಿನಿಧಿಗಳು ತುಂಬ ಬೇಕಿದೆ.

- ತರಗತಿವಾರು ಮಕ್ಕಳ ದಾಖಲಾತಿ ಹಾಜರಾತಿ ಪರಿಶೀಲಿಸಿ ದಾಖಲಿಸುವುದು.
- ಪಠ್ಯ ಪುಸ್ತಕ, ಸಮವಸ್ತ್ರ, ಬೈಸಿಕಲ್‌ಗಳ ವಿತರಣೆ ಕುರಿತು ನಮೂದಿಸುವುದು.
- ಶಾಲಾ ಕೊಠಡಿಗಳು ಮತ್ತು ಶಾಲೆಯ ಸ್ವಚ್ಛತೆ ಅಕ್ಷರ ದಾಸೋಹದ ಕೋಣೆಯ ಸ್ವಚ್ಛತೆ ಕುರಿತು ಪರಿಶೀಲಿಸಿ ನಮೂದಿಸುವುದು.
- ಕುಡಿಯುವ ನೀರು ಮತ್ತು ಶೌಚಾಲಯ ಸಮರ್ಪಕತೆ ಪರಿಶೀಲನೆ–ದಾಖಲಾತಿ.
- ಬಿಸಿಯೂಟ ತಯಾರಿ ಸ್ವಚ್ಛತೆ ಮತ್ತು ಗುಣಮಟ್ಟದ ಪರಿಶೀಲನೆ–ದಾಖಲಾತಿ.
- ಶಾಲೆಯಲ್ಲಿರುವ ಸೌಲಭ್ಯಗಳಾದ ಗ್ರಂಥಾಲಯ ಪ್ರಯೋಗಾಲಯ ಇತ್ಯಾದಿಗಳ ಬಳಕೆ ಮತ್ತು ದಾಖಲೀಕರಣ

- **ಶಾಲಾ ಸಭೆ:** ಸಮಾರಂಭದ ಔಪಚಾರಿಕ ಹಂತಗಳಾದ ಪ್ರಾರ್ಥನೆ, ಸ್ವಾಗತ ವಂದನಾರ್ಪಣೆ ಇರುತ್ತವೆ. ಈ ದಿನದ ಮಹತ್ವ; ಆಹ್ವಾನಿತರು ಶಾಲೆಯಲ್ಲಿ ಗಮನಿಸಿದ ಅಂಶಗಳು ಮತ್ತು ಕಂಡು ಬಂದ ಕುಂದು ಕೊರತೆ ಕುರಿತು ಆರೋಗ್ಯಕರ ಚರ್ಚೆ; ಕೊರತೆಯನ್ನು ತುಂಬಲು ಚಟುವಟಿಕೆಗಳ ಸ್ಥೂಲ ಪಟ್ಟಿ; ವಾರ್ಷಿಕ ಕಾರ್ಯಕ್ರಮ ಕುರಿತು ಚರ್ಚೆ ಕೊರತೆಗಳನ್ನು ನಿವಾರಿಸಲು ಮುಂದೆ ಬರುವವರ ಹೆಸರನ್ನು ಘೋಷಿಸುವುದು, ಚುನಾಯಿತ ಪ್ರತಿನಿಧಿಗಳು ತಮ್ಮ ನಿಧಿಯಿಂದ ಅನುದಾನ ನೀಡಲು ಒಪ್ಪಿದ್ದಲ್ಲಿ ಘೋಷಣೆ, ಮಕ್ಕಳ ಶಿಕ್ಷಣದ ಹಕ್ಕು ಕುರಿತು ತಿಳುವಳಿಕೆ ನುಡಿಗಳು; ಪ್ರಮಾಣ ವಚನ ಸ್ವೀಕಾರ; ಹಂತಗಳು ಈ ಸಭೆಯಲ್ಲಿ ಇರುತ್ತವೆ. ಪ್ರಮಾಣ ವಚನವನ್ನು ಸಭೆಯ ಅಧ್ಯಕ್ಷರು ಘೋಷಿಸಲಿ, ಉಳಿದವರು ಅದನ್ನು ಪುನರುಚ್ಚರಿಸಲಿ.

**ಪ್ರಮಾಣ ವಚನ:** "ಬಾಲ್ಯಾವಸ್ಥೆ' ವ್ಯಕ್ತಿಯ ಜೀವನದ ಅತ್ಯಂತ ಸುಂದರವಾದ ಮತ್ತು ನವಿರಾದ ಅವಸ್ಥೆ – ಇಲ್ಲಿ ದೊರೆಯುವ ಸಂಸ್ಕಾರದಿಂದ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂದು ನಂಬುತ್ತೇನೆ. ಶಾಲಾ ಶಿಕ್ಷಣ ಪ್ರತಿಯೊಬ್ಬ ಮಗುವಿಗೆ ದೊರೆಯುವಂತೆ ಮಾಡಲು; ಮಗುವು ನಿರಂತರವಾಗಿ ಶಾಲೆಗೆ ಬರುವಂತೆ ಮಾಡಲು ಹಾಗೂ ಮಕ್ಕಳು ಕಲಿಯಲು ಬೇಕಾದ ವಾತಾವರಣವನ್ನು ನಿರ್ಮಿಸಲು ಶ್ರಮಿಸುತ್ತೇನೆ.

ವಿದ್ಯಾರ್ಥಿಯ ಸ್ವಭಾವವು ಸಮಾಜಮುಖಿಯಾಗಿ ಇರುವಂತೆ ಮಾಡಲು ನಾನು ಶಿಶುಸ್ನೇಹಿ ವಿಧಾನಗಳನ್ನುಮಾತ್ರವೇ ಬಳಸುತ್ತೇನೆ ಎಂದು ಹಾಗೂ ಇತರರು ಇದೇ ರೀತಿ ಮಾಡಲು ಪ್ರೇರೇಪಿಸುತ್ತೇನೆ ಎಂದು ಪ್ರಮಾಣ ಮಾಡುತ್ತೇನೆ ".

**✓ಶಾಲೆಗಳ ಸಂಕ್ಷಿಪ್ತ ಮೌಲ್ಯಮಾಪನ**

- ದಿನಾಂಕ: 06.07.12 ರಿಂದ 31.07.12ರವರೆಗಿನ ಶಾಲಾ ಕೆಲಸದ ದಿನಗಳಲ್ಲಿ ಶಾಲೆಯ ಸಂಕ್ಷಿಪ್ತ ಮೌಲ್ಯಮಾಪನ ನಡೆಸಬೇಕು.
- ಮೌಲ್ಯಮಾಪನ ನಡೆಯುವ ದಿನ ಪ್ರತಿ ಶಾಲೆಗೆ ನಿಗಧಿಪಡಿಸಿದ ತಂಡಗಳಲ್ಲಿ ಶಾಲೆ ಪ್ರಾರಂಭದ ಮುನ್ನ 60 ನಿಮಿಷ ಮೊದಲೇ ಆ ಊರಿಗೆ ತೆರಳಿ–ಅಲ್ಲಿನ ಪೋಷಕರು, ಎಸ್.ಡಿ.ಎಂ.ಸಿ ಶಿಕ್ಷಣಾಸಕ್ತರು ಮತ್ತು ಅಧ್ಯಾಪಕರೊಂದಿಗೆ ಶಾಲೆಯಿಂದ ಹೊರಗೆ ಉಳಿದ ಮಕ್ಕಳ ಮನೆಗೆ ಹೋಗಿ ಮಕ್ಕಳನ್ನು ಶಾಲೆಗೆ ಕರೆತರುವ ಕೆಲಸವನ್ನು ಮಾಡಬೇಕು.

ತರುವಾಯ ಶಾಲೆಯ ಕೊಠಡಿ/ರಂಗಮಂದಿರ ಅಥವಾ ಊರಿನ ಜನರು ಸೇರುವ ಸ್ಥಳದಲ್ಲಿ

ಒಂದು ಸಭೆಯನ್ನು ಮಾಡಬೇಕು. ಈ ಸಭೆಯಲ್ಲಿ "ಮಕ್ಕಳ ಶಿಕ್ಷಣ ಹಕ್ಕು"ಕುರಿತು ಸಮುದಾಯಕ್ಕೆ ಅರಿವು ಮೂಡಿಸಬೇಕು. ಹಾಗೂ ಸಮುದಾಯದ ಪಾತ್ರ: ಮಕ್ಕಳಿಗೆ ಶಿಕ್ಷಣದ ಮಹತ್ವ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ನಡೆಸಬೇಕು.

- ಮೌಲ್ಯಮಾಪನವನ್ನು ತಂಡಗಳಲ್ಲಿ ನಡೆಸಬೇಕು. ಬ್ಲಾಕ್‌ನಲ್ಲಿನ ಪ್ರಾಥಮಿಕ ಶಾಲೆಗಳ ಸಂಖ್ಯೆಯನ್ನು ಆಧರಿಸಿ ಮೌಲ್ಯಮಾಪನ ತಂಡಗಳನ್ನು ಬ್ಲಾಕ್ ಹಂತದಲ್ಲಿ ರಚಿಸಿಕೊಳ್ಳಬೇಕು.
- ಪ್ರೌಢ ಶಾಲೆಗಳ ಸಂಖ್ಯೆಯನ್ನು ಅನುಸರಿಸಿ ಡಿ.ಡಿ.ಪಿ.ಐ ಆಡಳಿತ ಇವರು ಮೌಲ್ಯಮಾಪನ ತಂಡಗಳನ್ನು ರಚಿಸಿಕೊಳ್ಳಬೇಕು.
- ಪ್ರತೀ ತಂಡವು ಈ ಅವಧಿಯಲ್ಲಿ ಕನಿಷ್ಠ 20 ಸಂಕ್ಷಿಪ್ತ ಮೌಲ್ಯಮಾಪನ ಮಾಡಬೇಕು. ಪ್ರತಿ ದಿನ ಒಂದು ಶಾಲೆಯ ಮೌಲ್ಯಮಾಪನ ಮಾಡುವುದು.
- **ತಂಡಗಳು ಹೀಗಿರಲಿ.**

| **ಕಿರಿಯ ಪ್ರಾಥಮಿಕ ಶಾಲೆಗಳಿಗೆ(01+01)** | **ಹಿರಿಯ ಪ್ರಾಥಮಿಕ ಶಾಲೆಗಳಿಗೆ(01+02)** | **ಪ್ರೌಢ ಶಾಲೆಗಳಿಗೆ(01+06)** |
|---|---|---|
| ECO/BRP+CRP+ IERT | BEO+ ECO/BRP +CRP | ಜಿಲ್ಲಾ ನೋಡಲ್ ಅಧಿಕಾರಿಗಳು+6 |
| CRP+CRP/ IERT | BRC+ ECO/BRP +CRP | ಡಿ.ಡಿ.ಪಿ.ಐ+6 |
| IERT + IERT | ECO/BRP+2CRP | ರೀಡರ್+6 |
| CRP+ CRP | ಹಿರಿಯ ಉಪನ್ಯಾಸಕರು+ ECO/BRP+CRP | ಡಯಟ್(ಪ್ರಾಂಶುಪಾಲರು)+6 |
| | | ಸಿ.ಟಿ.ಇ (ಪ್ರಾಂಶುಪಾಲರು)+6 |
| | | ಇ.ಓ+6 |

- ಪ್ರೌಢ ಶಾಲೆ ಮೌಲ್ಯಮಾಪನಕ್ಕೆ 06 ಮಂದಿ ವಿಷಯ ಪರಿಣತರನ್ನು ಕರೆದೊಯ್ಯುವುದು.
- ವಿಷಯ ಪರಿಣತರು ಎಸ್.ಐ/ಉಪನ್ಯಾಸಕರು/ ಹಿರಿಯ ಉಪನ್ಯಾಸಕರು/ ಪ್ರೌಢಶಾಲೆಯ ಮುಖ್ಯಶಿಕ್ಷಕರು/ ಅನಿವಾರ್ಯ ಪ್ರಕರಣಗಳಲ್ಲಿ ಪ್ರೌಢ ವಿಭಾಗದ ಇಸಿಒ ಅಥವಾ ಬಿಆರ್‌ಪಿ ಆಗಿರಬಹುದು.
- ಮೇಲೆ ನೀಡಿದ ವಿಭಾಗೀಕರಣ ಸುಲಭ ಗ್ರಹಿಕೆಗಾಗಿಯೇ ವಿನಃ ಕೆಳಹಂತದ ಶಾಲೆಗಳನ್ನು ಮೌಲ್ಯಮಾಪನ ಮಾಡಬಾರದೆಂದು ಅಲ್ಲ. ಉದಾಹರಣೆಗೆ ಪ್ರೌಢಶಾಲೆ ತಂಡ ಪ್ರಾಥಮಿಕ ಶಾಲೆಯನ್ನು; ಹಿರಿಯ ಪ್ರಾಥಮಿಕ ಶಾಲಾ ತಂಡ ಕಿರಿಯ ಪ್ರಾಥಮಿಕ ಶಾಲೆಗಳ ಮೌಲ್ಯಮಾಪನ ಮಾಡಬಹುದು.
- ಮೌಲ್ಯ ಮಾಪನ ತಂಡವು ಸಂಕ್ಷಿಪ್ತ ಮೌಲ್ಯಮಾಪನ ನಮೂನೆ ಬಳಸಿ ಮೌಲ್ಯ ಮಾಪನ ಮಾಡಬೇಕು ಇದು ನಮೂನೆಯೇ ವಿನಃ ಅದೇ ಅಂಕಣದಲ್ಲಿ ಮಾತ್ರ ಮಾಹಿತಿ ನೀಡಬೇಕೆಂಬ ಭಾವನೆ ಬೇಡ. ಮಾಹಿತಿಯನ್ನು ವಿಸ್ತರಿಸಿ ಬರೆಯಬಹುದು. ಅಂಕಣದ ಸ್ಥಳವನ್ನು ವಿಸ್ತರಿಸಿಕೊಂಡು ಬರೆಯಹುದು.

- ಮೌಲ್ಯಮಾಪನ ನಮೂನೆಯಲ್ಲಿ 05.07.12 ರಂದು ಸಮುದಾಯವು ಕೆಲವು ಮಾಹಿತಿಯನ್ನು ಭರ್ತಿ ಮಾಡುತ್ತಾರೆ. ಮಾಡಿರುವ ಮೌಲ್ಯಮಾಪನ ಸಮ್ಮತವೆ ಎಂಬ ಬಗ್ಗೆ ಪರಿಶೀಲಿಸಿ ಮಾಡಬೇಕು.
- ದಿನಾಂಕ: 25.08.12ರೊಳಗೆ ಬ್ಲಾಕ್ ಹಂತದ ಶೈಕ್ಷಣಿಕ ಚಿತ್ರಣವನ್ನು ಬ್ಲಾಕ್ ಅಧಿಕಾರಿ ಪ್ರಕಟಿಸಬೇಕು; ಹಾಗೂ ಮಾಹಿತಿಯನ್ನು ಆಯಾ ಆಯುಕ್ತಾಲಯಗಳಿಗೆ ಜಿಲ್ಲೆಗಳು ಕ್ರೋಢೀಕರಿಸಿ ಕಳುಹಿಸಬೇಕು. ಬೆಂಗಳೂರು ಆಯುಕ್ತಾಲಯದ ಮಾಹಿತಿಯನ್ನು ಶಾಲಾ ಶಿಕ್ಷಣದ ಜೆ.ಡಿ.ಪಿ.ಐ ರವರಿಗೆ ಕಳುಹಿಸಬೇಕು.

ಈ ಮಾಹಿತಿಯಲ್ಲಿ ಶಾಲೆಯ ಶೈಕ್ಷಣಿಕ ಮತ್ತು ಸಹಪಠ್ಯ ವಿಷಯಗಳಲ್ಲಿ ಕಂಡು ಬರುವ ವಸ್ತು ಸ್ಥಿತಿಯನ್ನು ಕಳುಹಿಸಬೇಕು. ವರದಿಯಲ್ಲಿ ಮುಂದಿನ ಅಂಶಗಳು ಅಡಕವಾಗಿರಬೇಕು. ಶಾಲೆಗಳ ಸಂಖ್ಯೆ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು; ಕಲಿಯುತ್ತಿರುವ ಮಕ್ಕಳ ಸಂಖ್ಯೆ ಗಂಡು–ಹೆಣ್ಣು–ತರಗತಿವಾರು; ಮೌಲ್ಯಮಾಪನಕ್ಕೆ ಒಳಪಡಿಸಿದ ಮಕ್ಕಳ ಸಂಖ್ಯೆ: ತರಗತಿವಾರು, ಸಾಮರ್ಥ್ಯವಾರು– ಸರಿ ಉತ್ತರ; ಭಾಗಶಃ ಉತ್ತರ ಮತ್ತು ಉತ್ತರ ನೀಡದೆ ಇರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದಿಸಬೇಕು. ಹಾಗೂ ಭಾಗ 01/02ರ ಅಂಶಗಳಿಗೆ ಸ್ಥೂಲವಾಗಿ ಎಷ್ಟು ಶಾಲೆಗಳು, ಕೇಳಿರುವ ಪ್ರಶ್ನೆಗಳಿಗೆ ಅನುಗುಣವಾಗಿ ಸರಿಯಾದ ವ್ಯವಸ್ಥೆಯನ್ನು ಕಾಯ್ದುಕೊಂಡಿರುತ್ತಾರೆ ಎಂಬ ವಿಷಯ ನಮೂದಿಸಬೇಕು. ಗಮನಾರ್ಹ ಸಂಗತಿಗಳು; ಭಾವಚಿತ್ರಗಳನ್ನು ಹಾಕಬೇಕು. ಶಾಲಾಮಟ್ಟದಲ್ಲಿ ಇಲಾಖೆ ಹಮ್ಮಿಕೊಂಡಿರುವ ವಿಶೇಷ ಚಟುವಟಿಕೆಗಳ ಬಗ್ಗೆ ವರದಿಯಲ್ಲಿ ಪ್ರಸ್ತಾಪವಿರಬೇಕು. 16ಪುಟಕ್ಕಿಂತ ವರದಿ ಹೆಚ್ಚಾಗಬಾರದು.

✓ **ನಿರಂತರ ಕಾರ್ಯಾನುಸರಣೆ:** ಬ್ಲಾಕ್‌ನಲ್ಲಿ ದೊರೆತ ಫಲಿತಾಂಶವನ್ನು ಗಮನದಲ್ಲಿ ಇಟ್ಟುಕೊಂಡು ಹಿಮ್ಮಾಹಿತಿ ಮತ್ತು ಉಸ್ತುವಾರಿ ನೀಡುವ ಸಲುವಾಗಿ ಶಾಲೆಗಳ ವರ್ಗೀಕರಣ ಮಾಡುವುದು. ಪ್ರತಿಶತ 75+ಅಂಕಗಳನ್ನು ಗಳಿಸಿದ ಶಾಲೆಗಳು ಉತ್ತಮ ಎಂದು 50ರಿಂದ 74ರವರೆಗಿನ ಶಾಲೆಗಳನ್ನು ಸಾಧಾರಣ ಎಂತಲು,30 ರಿಂದ 49ರವರೆಗಿನ ಶಾಲೆಗಳನ್ನು ಪ್ರಗತಿಶೀಲ ಶಾಲೆಗಳೆಂತಲು, 29ಕ್ಕಿಂತ ಕಡಿಮೆ ಇರುವ ಶಾಲೆಗಳನ್ನು ನಿಮ್ನ ಹಂತದ ಶಾಲೆಗಳು ಎಂದು ವರ್ಗೀಕರಿಸುವುದು.

- ಕಳಪೆ ಮತ್ತು ಪ್ರಗತಿ ಶೀಲ ಶಾಲೆಗಳನ್ನು ಬ್ಲಾಕ್ ಹಂತದಲ್ಲಿರುವ ಮತ್ತು ಜಿಲ್ಲಾ ಹಂತದಲ್ಲಿರುವ ಅಧಿಕಾರಿಗಳು ಭೇಟಿ ಮಾಡಿ ಹಿಮ್ಮಾಹಿತಿ ನೀಡಲು ಅನುಕೂಲವಾಗುವಂತೆ ಹಂಚಿಕೆ ಮಾಡಿಕೊಂಡು ಒಂದು ಕ್ರಿಯಾ ಯೋಜನೆಯನ್ನು ಬ್ಲಾಕ್, ಕ್ಲಸ್ಟರ್, ಶಾಲೆ ಮಾಡಿಕೊಳ್ಳುವುದು. ಇವುಗಳ ಪ್ರತಿಗಳು ಜಿಲ್ಲಾ ಹಂತದಲ್ಲಿ ಲಭ್ಯವಿರಬೇಕು.
- ಕ್ರಿಯಾ ಯೋಜನೆಯಲ್ಲಿ ಎರಡು ಪ್ರಮುಖವಾದ ಅಂಶಗಳಿವೆ; 1)ಶೈಕ್ಷಣಿಕ 2)ಸಹಪಠ್ಯ ಶೈಕ್ಷಣಿಕ ಆಯಾಮದಲ್ಲಿ ಭಾಗಶಃ ಉತ್ತರಿಸಿದ ಮತ್ತು ಉತ್ತರವನ್ನೇ ನೀಡದಿರುವ ವಿದ್ಯಾರ್ಥಿಗಳ ಕುರಿತು ಮತ್ತು ಅಂತಹ ಸಾಮರ್ಥ್ಯ ಮತ್ತು ಪರಿಕಲ್ಪನೆಗಳನ್ನು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ನೆರವಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಈ ದಿಶೆಯಲ್ಲಿ ಅಧ್ಯಾಪಕರಿಗೆ ಬೇಕಾದ ಅಭಿಶಿಕ್ಷಣವನ್ನು ಮಾಸಿಕ ಸಭೆಯನ್ನು ಆಯೋಜಿಸುವುದು. ಪೋಷಕರಿಗೆ ತಿಳುವಳಿಕೆ ನೀಡಲು ಪೋಷಕರ ಸಭೆ ಇತ್ಯಾದಿಗಳನ್ನು ಆಯೋಜಿಸಬಹುದು. ಇಂತಹ ಸಂವಾದಿಯಾದ ಕಾರ್ಯಕ್ರಮಗಳು ಕ್ರಿಯಾಯೋಜನೆಯಲ್ಲಿರಲಿ.

- ಸಹಪಠ್ಯ ವಿಷಯಗಳಿಗೆ ಸಂಬಂಧಿಸಿದಂತೆ ಉದಾ: ಶಾಲಾ ಸ್ವಚ್ಛತೆ, ಕೈತೋಟ ನಿರ್ಮಾಣ,ಕಾಂಪೌಂಡ್ ನಿರ್ಮಾಣ ಮುಂತಾದ ಅಂಶಗಳಿಗೆ ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಬಳಸಿಕೊಳ್ಳುವುದು ಈ ನಂತರವೂ ಕೊರತೆಯಾಗುವುದಿದ್ದಲ್ಲಿ ಸಮುದಾಯದ ಸಹಕಾರವನ್ನು ಪಡೆಯಲು ಕ್ರಿಯಾ ಯೋಜನೆಯನ್ನು ರೂಪಿಸಿಕೊಳ್ಳುವುದು.
- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆ ವ್ಯಾಪ್ತಿಯ ಶಾಲೆಗಳ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲು ಒಂದು ವಿಶೇಷ ಸಭೆಯನ್ನು ಬ್ಲಾಕ್ ಶಿಕ್ಷಣಾಧಿಕಾರಿಯವರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿಗಳೊಂದಿಗೆ ಸಮಾಲೋಚಿಸಿ ಹಮ್ಮಿಕೊಳ್ಳುವುದು. ಈ ಸಭೆಯಲ್ಲಿ ಶಾಲೆಯಲ್ಲಿ ವಿವಿಧ ವಿಷಯಗಳ ಕುರಿತು ಕಂಡುಬರುವ ವಸ್ತುಸ್ಥಿತಿ, ಕೊರತೆಗಳು ಮತ್ತು ಜನ ಪ್ರತಿನಿಧಿಗಳು– ಸಮುದಾಯ ಕೈಗೊಳ್ಳಬೇಕಾದ ಕ್ರಮಗಳ ಕುರಿತು ವ್ಯಾಪಕ ಚರ್ಚೆಯಾಗಬೇಕು.
- ಒಟ್ಟಾರೆಯಾಗಿ ಶಾಲೆ, ಕ್ಲಸ್ಟರ್ ಹಂತದ ಮತ್ತು ಬ್ಲಾಕ್ ಹಂತದ ಕ್ರಿಯಾ ಯೋಜನೆಗಳು 25.8.2012ರೊಳಗೆ ತಯಾರಾಗಬೇಕು. ಇವುಗಳ ಅನುಷ್ಠಾನವನ್ನು ಆವರ್ತಕವಾಗಿ ಭೇಟಿ ಮಾಡಿ ಖಚಿತಪಡಿಸಿಕೊಳ್ಳುವುದು. ಈ ಕ್ರಿಯೆ ಜನವರಿ10ನೇ ತಾರೀಖಿನವರೆಗೆ ನಡೆಯಲಿದೆ.
- ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಸಭೆಗಳಲ್ಲಿ ಶಾಲೆಗಳ ಸ್ಥಿತಿಗತಿ ಮತ್ತು ಕ್ರಿಯಾ ಯೋಜನೆಯ ಮುಖ್ಯಾಂಶಗಳನ್ನು ಹಂಚಿಕೊಳ್ಳಲು ಏರ್ಪಾಟು ಮತ್ತು ಕೊರತೆ ಪರಿಹಾರಕ್ಕೆ ಸಹಕರಿಸಲು ಕೋರುವುದು.
- ಬ್ಲಾಕ್‌ನ ಶೇ.10ರಷ್ಟು ಶಾಲೆಗಳನ್ನು ರ‍್ಯಾಂಡಮ್ ಆಗಿ ಆಯ್ಕೆಮಾಡಿಕೊಂಡು ಈ ಹಿಂದೆ ರಚಿಸಿದ ತಂಡಗಳ ಮೂಲಕ ಅದೇ ಕಲಿಕಾ ಸೂಚಕಗಳನ್ನು ಬಳಸಿ ಮೌಲ್ಯಮಾಪನ ಮಾಡಿ ಬ್ಲಾಕ್‌ನಲ್ಲಿನ ಶಾಲೆಗಳ ಪ್ರಗತಿಯನ್ನು ಗುರುತಿಸುವುದು.
- ಈ ರೀತಿ ಶಾಲೆಗಳನ್ನು ರ‍್ಯಾಂಡಮ್ ಆಗಿ ಆಯ್ಕೆ ಮಾಡಿಕೊಳ್ಳುವಾಗ ಈ ಹಿಂದೆ ಶಾಲೆಗಳನ್ನು ವರ್ಗೀಕರಿಸಿದಂತೆ, ಉತ್ತಮ, ಸಾಧಾರಣ ಪ್ರಗತಿಶೀಲ, ಮತ್ತು ಕಳಪೆ ವಿಭಾಗಗಳಲ್ಲಿ ಪ್ರತಿಶತ 10ಶಾಲೆಗಳು ಬರುವಂತೆ ಆಯ್ಕೆ ಮಾಡಿಕೊಳ್ಳಬೇಕು.
- ಈ ರೀತಿ 2ನೇ ಬಾರಿಗೆ ಮೌಲ್ಯಮಾಪನಕ್ಕೆ ಒಳಪಡಿಸಲ್ಪಡಿಸದೆ ಇರುವ ಶಾಲೆಯ ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳ ಕಲಿಕೆಯ ಪ್ರಗತಿಯನ್ನು ಈ ಹಿಂದಿನ ಮಾನದಂಡಗಳಂತೆ ಪರಿಶೀಲಿಸಿ ಪ್ರಗತಿಯನ್ನು ಗುರುತಿಸಿಕೊಳ್ಳಬೇಕು.
- ಹಾಗೂ ಎಲ್ಲಾ ಶಾಲೆಗಳು ಸಹಪಠ್ಯ ಅಂಶಗಳಲ್ಲಿ ಜುಲೈ2012ರಲ್ಲಿ ಗುರುತಿಸಲಾಗಿರುವ ಕೊರತೆಯ ಅಂಶಗಳನ್ನು ಎಷ್ಟರಮಟ್ಟಿಗೆ ಸಾಧಿಸಿದ್ದಾರೆ ಎನ್ನುವುದನ್ನು ಗುರುತಿಸಬೇಕು. ಈ ವರದಿಯು ಬ್ಲಾಕ್ ಕಛೇರಿಗೆ ದಿನಾಂಕ:15.1.2013ರೊಳಗೆ ತಲುಪುವಂತೆ ಕಳುಹಿಸಬೇಕು.
- ಬ್ಲಾಕ್ ಹಂತದಲ್ಲಿ ಈ ವರದಿಗಳನ್ನು ಸಂಗ್ರಹಿಸಿ ಪ್ರಥಮ ಹಾಗೂ ಅಂತಿಮ ಮೌಲ್ಯಮಾಪನದಲ್ಲಿ ಆಗಿರುವ ಪ್ರಗತಿಯನ್ನು ಗುರುತಿಸಬೇಕು. ಇದೇ ರೀತಿ ಶಾಲೆ ಮತ್ತು ಕ್ಲಸ್ಟರ್ ಹಂತದಲ್ಲಿ ಆಗಿರುವ ಪ್ರಗತಿಯನ್ನು ಗುರುತಿಸುವುದು.
- ಪ್ರಗತಿಯ ವರದಿಯನ್ನಾಧರಿಸಿ ತಾಲ್ಲೂಕು ಮಟ್ಟದ ಶಾಲೆಗಳ ಪ್ರಗತಿಯ ಸೂಕ್ತ ಚಿತ್ರಣವನ್ನು ತಯಾರಿಸಬೇಕು.

- ಈ ವರದಿಯಲ್ಲಿ ಬಹುಮುಖ್ಯವಾಗಿ ಕೊರತೆಗಳಾವುವು ಅವು ಯಾವ ಪ್ರಮಾಣದಲ್ಲಿದ್ದವು ತದನಂತರ ಈ ಪ್ರಮಾಣವನ್ನು ಎಷ್ಟರ ಮಟ್ಟಿಗೆ ಇಳಿಸಲಾಗಿದೆ ಎನ್ನುವ ಅಂಶಗಳು ವರದಿಯಲ್ಲಿರಬೇಕು ಅಲ್ಲದೆ ಈ ಪ್ರಕ್ರಿಯೆಯಲ್ಲಿ ದಾಖಲೆ ಮಾಡಬಹುದಾದಂತಹ ಸನ್ನಿವೇಶಗಳು, ಘಟನೆಗಳು ಇದ್ದಲ್ಲಿ ಅವುಗಳನ್ನು ಆವರಣದಲ್ಲಿ ಉಲ್ಲೇಖಿಸುವುದು ಈ ವರದಿಯನ್ನು ಜಿಲ್ಲಾ ಹಂತದಲ್ಲಿ ಕ್ರೋಢೀಕರಿಸಿ ಬ್ಲಾಕ್ ಹಂತದ ಸಮಾವೇಶದ ವರದಿಯೊಂದಿಗೆ –ದಿನಾಂಕ:05–02–2013ರೊಳಗೆ ಆಯಾ ಆಯುಕ್ತಾಲಯಗಳಿಗೆ ತಲಪುವಂತೆ ಕಳುಹಿಸಬೇಕು. ಪ್ರತಿ ಜಿಲ್ಲೆಯ ವರದಿಯು 16ಪುಟಗಳನ್ನು ಮೀರಿರಬಾರದು.

✓<u>**ಎಸ್.ಡಿ.ಎಂ.ಸಿ/ ಸಮುದಾಯ/ಅಧ್ಯಾಪಕರುಗಳ ಸಮಾವೇಶ:**</u>

ದಿನಾಂಕ: 20.1.2013ರಿಂದ 31.1.2013ರೊಳಗೆ ಬ್ಲಾಕ್ ಹಂತದ ಸಮಾವೇಶಗಳನ್ನು ನಡೆಸಬೇಕು. ಬ್ಲಾಕ್ ಹಂತದಲ್ಲಿ ಶಾಲೆಗಳ ಸಂಖ್ಯೆ ಜಾಸ್ತಿ ಇದ್ದು ಶಾಲೆಗಳು ದೂರ–ದೂರ ಇದ್ದರೆ ಎರಡು ಸಮಾವೇಶವನ್ನು ಬೇರೆ–ಬೇರೆ ಸ್ಥಳಗಳಲ್ಲಿ ಆಯೋಜಿಸಬಹುದು.

- ಬ್ಲಾಕ್ ಹಂತದ ಸಮಾವೇಶಕ್ಕೆ ಸ್ಥಳೀಯ ಜನಪ್ರತಿನಿಧಿಗಳು, ಎಸ್.ಡಿ.ಎಂ.ಸಿ ಅಧ್ಯಕ್ಷರು, ಮುಖ್ಯೋಪಾಧ್ಯಾಯರು ಶಿಕ್ಷಕರ ಪ್ರತಿನಿಧಿಗಳು, ದಾನಿಗಳನ್ನು ಆಹ್ವಾನಿಸುವುದು.
- ಶಾಲಾವಾರು ಮಾಡಿರುವ ಶೈಕ್ಷಣಿಕ ಮತ್ತು ಸಹಪಠ್ಯ ಪ್ರಗತಿಯನ್ನು ಬಿಂಬಿಸುವಂತಹ ಚಾರ್ಟುಗಳು/ ಪೋಸ್ಟರ್‌ಗಳ ಪ್ರದರ್ಶನವನ್ನು ಏರ್ಪಡಿಸುವುದು. ದಾನಿಗಳು ನೀಡಿದ ವಸ್ತುಗಳ ಪ್ರದರ್ಶನದ ಅಂಶವು ಐಚ್ಛಿಕ. ಇದನ್ನು ಬ್ಲಾಕ್ ಹಂತದಲ್ಲಿ ತೀರ್ಮಾನಿಸಬಹುದು.

**ಕಾರ್ಯಕ್ರಮದ ಹರವು, ಕಾಲಮಿತಿ, ಜವಾಬ್ದಾರಿ**

| ಕ್ರ.ಸಂ | ನಿರ್ವಹಿಸಬೇಕಾದ ಕೆಲಸಗಳು | ಕಾಲಮಿತಿ (ಗರಿಷ್ಠ ಸಮಯ) | ಜವಾಬ್ದಾರಿ |
|---|---|---|---|
| 01 | ಸುತ್ತೋಲೆ ನೀಡುವುದು | 13.6.12 | ಸಿಪಿಐ, ಎಸ್‌ಪಿಡಿ |
| 02 | ಜಿಲ್ಲಾ ಹಂತದಲ್ಲಿ ಬಿ.ಇ.ಒಗಳ, ತಾಲ್ಲೂಕು ನೋಡಲ್ ಅಧಿಕಾರಿಗಳ ಸಭೆ | 14.6.12 | ಡಿಡಿಪಿಐ(ಆ) (ಅ) |
| 03 | ಕೆಎಸ್‌ಇಇಬಿಯಿಂದ ಕಲಿಕೆಯ ಸೂಚಕಗಳನ್ನು ಸಿಪಿಐರವರಿಗೆ (ಮೌಲ್ಯಮಾಪನೆ)ಯನ್ನು ನೀಡುವುದು | 15.6.12 | ನಿರ್ದೇಶಕರು (ಕೆಎಸ್‌ಇಇಬಿ) |
| 04 | ಸಂಕ್ಷಿಪ್ತ ಮೌಲ್ಯಮಾಪನ ನಮೂನೆಯನ್ನು ಡಿಡಿಪಿಐ ಮತ್ತು ಬಿಇಒಗಳಿಗೆ ಈ–ಮೇಲ್ ಮೂಲಕ ಕಳುಹಿಸುವುದು ಮತ್ತು ಎಸ್‌ಎಸ್‌ಎಗೆ ಸಲ್ಲಿಸುವುದು. | 17.6.12 | ಡಿಪಿಐ (ಪ್ರೌಢಶಿಕ್ಷಣ/ ಪ್ರಾಥಮಿಕ ಶಿಕ್ಷಣ) |
| 05 | ಕಾರ್ಯಾಗಾರ–(ಡಿಡಿಪಿಐ, ಡಯಟ್ ಪ್ರಿನ್ಸಿಪಾಲ್, ಉಪಯೋಜನಾಸಮನ್ವಯಾಧಿಕಾರಿ, ಮತ್ತು ಜಿಲ್ಲಾ ಹಂತದ ಆರ್.ಟಿ.ಇ ನೋಡಲ್ ಅಧಿಕಾರಿ. | 19.6.12 ಸ್ಥಳ:ಶಿಕ್ಷಕರ ಸದನ, ಬೆಂಗಳೂರು | ಎಸ್‌ಎಸ್‌ಎ/ಸಿಪಿಐ, ಎಸ್‌ಪಿಡಿ,ಎಲ್ಲಾ ಡಿಪಿಐ |
| 06 | ಜಿಲ್ಲಾ ಹಂತದಲ್ಲಿ ಕಾರ್ಯಾಗಾರ–ಬಿಇಒ,ಬಿಆರ್‌ಸಿ, ಪ್ರತಿ ಬ್ಲಾಕ್‌ನಿಂದ ಒಬ್ಬ ಇಸಿಓ ಮತ್ತು ಬಿಆರ್‌ಪಿ | 26.6.12 | ಡಿಡಿಪಿಐ (ದಿನಾಂಕ:19.6.12ರಂದು ಕಾರ್ಯಾಗಾರದಲ್ಲಿ ಹಾಜರಾದತಂಡದೊಂದಿಗೆ) |

| | | | |
|---|---|---|---|
| 07 | ಬ್ಲಾಕ್ ಹಂತದಲ್ಲಿ ಶಾಲಾ ಮುಖ್ಯಸ್ಥರ ಮತ್ತು ಬ್ಲಾಕ್ ಹಂತದ ಎಲ್ಲಾ ಮೇಲ್ವಿಚಾರಕರ ಸಭೆ(ಪ್ರಾಥಮಿಕ/ ಪ್ರೌಢಶಾಲೆ) | 27.6.12 | ಬಿಇಒ(ಜಿಲ್ಲಾ ಹಂತದ ಕಾರ್ಯಾಗಾರದಲ್ಲಿ ಭಾಗವಹಿಸಿದ ತಂಡದೊಂದಿಗೆ) |
| 08 | ರಾಜ್ಯ ಹಂತದಲ್ಲಿ ಎಂಎಲ್ಎ, ಎಂಎಲ್‌ಸಿ, ಸಚಿವರು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪತ್ರ ಬರೆಯುವುದು. | 28.6.12 | ಎಸ್‌ಎಸ್‌ಎ |
| 09 | ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು/ಸದಸ್ಯರು ಮತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪತ್ರ ಬರೆಯುವುದು. | 28.6.12 | ಸಿಇಒ/ಡಿಡಿಪಿಐ |
| 10 | ತಾಲ್ಲೂಕು ಹಂತದಲ್ಲಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು/ಸದಸ್ಯರು ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಪತ್ರ ಬರೆಯುವುದು. | 28.6.12 | ಟಿಪಿಇಒ/ಬಿಇಒ |
| 11 | ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಸದಸ್ಯರಿಗೆ ಮತ್ತು ಆಸಕ್ತ ಹಳೆಯ ವಿದ್ಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಪತ್ರ ಬರೆಯುವುದು | 28.6.12 | ಶಾಲೆಯ ಮುಖ್ಯೋಪಾಧ್ಯಾಯರು |
| 12 | ಮೌಲ್ಯಮಾಪನ ತಂಡಗಳ ರಚನೆ ಮತ್ತು ಸಂಕ್ಷಿಪ್ತ ಮೌಲ್ಯಮಾಪನದಲ್ಲಿ ಗಮನಿಸಬೇಕಾದ ಅಂಶಗಳು ಕೇಳುವ ಪ್ರಶ್ನೆಗಳು, ಮೌಲ್ಯಮಾಪನಾ ಕ್ರಮಗಳು ಕುರಿತು ಸಿಆರ್‌ಪಿಯಿಂದ ಜಿಲ್ಲಾ ನೋಡಲ್ ಅಧಿಕಾರಿಗಳವರೆಗಿನ ಎಲ್ಲಾ ಮೌಲ್ಯಮಾಪಕರಿಗೆ ಅಭಿಶಿಕ್ಷಣ ಮತ್ತು ಬ್ಲಾಕ್‌ವಾರು ಕ್ರಿಯಾ ಯೋಜನೆ ತಯಾರಿಕೆ. | 29.6.12 | ಡಿಡಿಪಿಐ(ಆ) (ಅ) ಜಿಲ್ಲಾ ನೋಡಲ್ ಅಧಿಕಾರಿ. |
| 13 | ಪ್ರಚಾರ ಕಾರ್ಯ<br>✓ಗೋಡೆ ಫಲಕ ಸಾಹಿತ್ಯ ನಿರ್ಮಾಣ, ಮುದ್ರಣ ಮತ್ತು ಶಾಲೆಗಳಿಗೆ ಬಿಇಒ ಮೂಲಕ ಹಂಚಿಕೆ<br>✓ತಿಂಗಳ ತಿರುಳು ಕಾರ್ಯಕ್ರಮದಲ್ಲಿ ಈ ಕಾರ್ಯಕ್ರಮ ಹಾಗೂ ಶಾಲಾಭಿವೃದ್ಧಿ ಯೋಜನೆ ಅಳವಡಿಕೆ/ಪ್ರಕಟಣೆ<br>✓ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಈ ಕಾರ್ಯಕ್ರಮ ಕುರಿತು ಮಾಹಿತಿ ಸಾರ್ವಜನಿಕರಿಗೆ ತಲುಪಿಸಲು ಪ್ರಾರಂಭ<br>✓ರಾಜ್ಯ, ಜಿಲ್ಲೆ, ತಾಲ್ಲೂಕು ಹಂತದ ಪತ್ರಿಕೆಗಳಲ್ಲಿಯೂ ಕಾರ್ಯಕ್ರಮ ಸುದ್ದಿಯಾಗಿ ಪ್ರಕಟಿಸಲು ಕ್ರಮ | 30.6.12<br><br>1.7.12<br><br>28.6.12<br><br>30.6.12 | ಎಸ್‌ಎಸ್‌ಎ<br><br>ಸಿಪಿಐ<br><br>ಎಸ್‌ಎಸ್‌ಎ<br><br>ಸಿಪಿಐ, ಎಸ್‌ಎಸ್‌ಎ, ಡಿಡಿಪಿಐ(ಆ),ಬಿಇಒ |
| 14 | ಸಂಕ್ಷಿಪ್ತ ಮೌಲ್ಯಮಾಪನ, ಮಕ್ಕಳ ಶಿಕ್ಷಣ ಹಕ್ಕು ಸಾಹಿತ್ಯದ ಮುದ್ರಣ ಬ್ಲಾಕ್‌ಗಳಿಗೆ ಹಂಚಿಕೆ. | 30.6.12 | ಎಸ್‌ಎಸ್‌ಎ |

| | | | |
|---|---|---|---|
| 15. | ಶಾಲಾವಾರು ಒಒಎಸ್‌ಸಿ ಮಕ್ಕಳ ಪಟ್ಟಿ ತಯಾರಿಕೆ ಮತ್ತು ತಂಡಗಳಲ್ಲಿ 05-07-12ರಂದು ಮನೆ ಮನೆಗೆ ಹೋಗಿ ಕರೆತರಲು ಸ್ಥೂಲ ಯೋಜನೆ ತಯಾರಿ | 02.7.12 | ಮುಖ್ಯೋಪಾಧ್ಯಾಯರು |
| 16. | ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ನಡೆಸುವ ಮಾಧ್ಯಮಗೋಷ್ಠಿ | 04.07.12 | ಎಸ್.ಎಸ್.ಎ |
| 17. | ಶಾಲೆಗಾಗಿ ನಾವು-ನೀವು ಕಾರ್ಯಕ್ರಮ ಸಮಾರಂಭ | 05.7.12 | ಎಲ್ಲಾ ಶಾಲೆಗಳಲ್ಲಿ |
| 18 | ಶಾಲೆಗಳ ಸಂಕ್ಷಿಪ್ತ ಮೌಲ್ಯಮಾಪನ | 06.7.12 ರಿಂದ 31.07.12 | ಎಲ್ಲಾಉಸ್ತುವಾರಿ ಅಧಿಕಾರಿಗಳು |
| 19. | ಸಂಕ್ಷಿಪ್ತ ಮೌಲ್ಯಮಾಪನದ ಮಾಹಿತಿಯನ್ನು ಕ್ರೋಢೀಕರಿಸಲು ಮೃದು ತಂತ್ರಾಂಶ ತಯಾರಿ ಮತ್ತು ಬ್ಲಾಕುಗಳಿಗೆ ಕಳುಹಿಸುವುದು ಹಾಗೂ ಅಗತ್ಯ ಸೂಚನೆಗಳನ್ನು ಬಿಇಒಗಳಿಗೆ ನೀಡುವುದು | 10.7.12 | ಸಿಪಿಐ ಕಛೇರಿ ಇ-ಗೌರ್ನೆನ್ಸ್‌ಘಟಕ |
| 20 | ಸಂ/ ಮೌಲ್ಯಮಾಪನದ ಮಾಹಿತಿ ಕ್ರೋಢೀಕರಣ/ ಸಂಚಯನ ಜಿಲ್ಲೆಗಳಿಗೆ ನೀಡಿಕೆ. | 10.7.12 ರಿಂದ 08.08.12 | ಬಿಇಒ |
| 21. | ಜಿಲ್ಲಾ ಹಂತದಲ್ಲಿ ಕ್ರೋಢೀಕರಣ ಮತ್ತು ರಾಜ್ಯ ಹಂತಕ್ಕೆ ಸಲ್ಲಿಕೆ | 14.8.12 | ಡಿಡಿಪಿಐ(ಆ) (ಅ) |
| 22 | ಶಾಲೆಗಳ ವರ್ಗೀಕರಣ ಮತ್ತು ಕ್ರಿಯಾ ಯೋಜನೆ ತಯಾರಿಕೆ | 15.8.12 | ಬಿಇಒ/ಡಯಟ್ |
| 23. | ಬಿಇಒ/ಬಿಆರ್‌ಸಿ/ಇಸಿಒ/ಬಿಆರ್‌ಪಿ/ಸಿಆರ್‌ಪಿ ಗಳ ಸಭೆ-ಕ್ರಿಯಾ ಯೋಜನೆ ಮಂಡನೆ-ಅನುಷ್ಠಾನ ಕ್ರಮಗಳ ಬಗ್ಗೆ ಅಭಿಶಿಕ್ಷಣ | 18.8.12 | ಡಿಡಿಪಿಐ(ಆ) (ಅ) |
| 24. | ರಾಜ್ಯ ಹಂತದಲ್ಲಿ ವರದಿ ಸಂಚಯನ, ಸರ್ಕಾರಕ್ಕೆ ವರದಿ ಸಲ್ಲಿಕೆ | 30.8.12 | ಜೆಡಿಪಿಐ(ಶಾಲಾ ಶಿಕ್ಷಣ) |
| 25. | ಕಾರ್ಯಾನುಸರಣೆ<br>✓ಬ್ಲಾಕ್ ಹಂತದ ಮಾಸಿಕ ಸಭೆಗಳಲ್ಲಿ ಈ ಕುರಿತು ಆಗಿರುವ ಪ್ರಗತಿ ಚರ್ಚೆ/ಹಿಮ್ಮಾಹಿತಿ<br>✓ಪ್ರಗತಿ ಶೀಲ ಮತ್ತು ನಿಮ್ನ ಹಂತದಲ್ಲಿರುವ ಶಾಲೆಗಳಿಗೆ ಆವರ್ತಕ ಭೇಟಿ. | 19.8.12 ರಿಂದ 10.01.13 | ಎಲ್ಲಾ ಉಸ್ತುವಾರಿದಾರರು-ತಮ್ಮ ಕ್ಷೇತ್ರದಲ್ಲಿ |
| 26. | ಎರಡನೇ ಮೌಲ್ಯಮಾಪನಕ್ಕೆ ಶಾಲೆಗಳ ಆಯ್ಕೆ-(ವರ್ಗೀಕರಿಸಿರುವ 04 ವಿಧಗಳ ಶಾಲೆಗಳ ಪೈಕಿ ಪ್ರತಿ ವಿಭಾಗದಲ್ಲಿ ಪ್ರತಿಶತ 10 ಶಾಲೆಗಳು | 10.1.2013 | ಡಿಡಿಪಿಐ(ಆ) (ಅ) |
| 27. | ಮಾಲ್ಯಮಾಪಕರಿಗೆ ಅಭಿಶಿಕ್ಷಣ | 12.1.2013 | ಡಿಡಿಪಿಐ(ಆ) (ಅ) |
| 28. | ಆಯ್ದ ಶಾಲೆಗಳಲ್ಲಿ ಮೌಲ್ಯಮಾಪನ ಮತ್ತು ಮಾಹಿತಿ ಕ್ರೋಢೀಕರಣ | 20.1.2013 | ಮೌಲ್ಯಮಾಪಕರು |
| 29 | ಸಹಪಠ್ಯ ಆಯಾಮದ ಮಾಹಿತಿ ಸಂಗ್ರಹಣೆ<br>ಪ್ರತಿ ಶಾಲೆಯಿಂದ ಮತ್ತು ಕ್ರೋಢೀಕರಣ | 31.12.12 ರಿಂದ 10.1.2013 | ಬಿಇಒ/ಬಿಆರ್‌ಸಿ |

| | | | |
|---|---|---|---|
| 30 | ಬ್ಲಾಕ್ ಹಂತದ ಶಾಲೆಗಾಗಿ ನಾವುನೀವು ಕಾರ್ಯಕ್ರಮದ ವರದಿ ತಯಾರಿ | 22.1.2013 | ಬಿಇಒ |
| 31 | ಎಸ್‌ಡಿಎಂಸಿ/ಅಧ್ಯಾಪಕರ/ಸ್ವಯಂ ಸೇವಕರ ಬ್ಲಾಕ್ ಹಂತದ ಸಮಾವೇಶ | 31.1.2013 | ಬಿಇಒ |
| 32 | ಸಮಾವೇಶದ ಸಂಕ್ಷಿಪ್ತ ವರದಿ ಸಲ್ಲಿಕೆ | 10.2.2013 | ಡಿಡಿಪಿಐ(ಆ) |
| 33 | ರಾಜ್ಯ ಹಂತದಲ್ಲಿ ಶಾಲೆಗಾಗಿ ನಾವು–ನೀವು ಕಾರ್ಯಕ್ರಮ ಪ್ರಗತಿ ಸಂಚಯನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು. | 25.2.2013 | ಜೆಡಿಪಿಐ(ಶಾಲಾ ಶಿಕ್ಷಣ) |

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ ಮತ್ತು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಬೆಂಗಳೂರು

**ಇವರಿಗೆ:**

✓ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ

✓ರಾಜ್ಯದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ

✓ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

**ಪ್ರತಿಗಳನ್ನು**

✓ಅಪರ ಆಯುಕ್ತರು – ಧಾರವಾಡ ಮತ್ತು ಗುಲ್ಬರ್ಗಾ ಅಗತ್ಯ ಕ್ರಮಕ್ಕಾಗಿ.

✓ಅಪರ ಆಯುಕ್ತರು(ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು

✓ನಿರ್ದೇಶಕರು(ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ, ಡಿಎಸ್‌ಆರ್‌ಟಿ, ಕೆಎಸ್‌ಇಐಬಿ,ಮೈನಾರಿಟಿ, ಇತರೆ ಪರೀಕ್ಷೆಗಳು, ಪಠ್ಯಪುಸ್ತಕ, ಧಾರವಾಡ, ಗುಲ್ಬರ್ಗಾ ಆರ್‌ಎಂಎಸ್‌ಎ ಮತ್ತು ಎಸ್‌ಎಸ್‌ಎ, ಸಿಸ್‌ಲೇಪ್)

✓ವಿಭಾಗೀಯ ಸಹನಿರ್ದೇಶಕರುಗಳು–ಮೈಸೂರು, ಬೆಂಗಳೂರು, ಬೆಳಗಾವಿ, ಗುಲ್ಬರ್ಗಾ

✓ಸಹನಿರ್ದೇಶಕರು ಮಧ್ಯಾಹ್ನ ಉಪಹಾರ ಯೋಜನೆ, ಡಿಎಸ್‌ಇಆರ್‌ಟಿ, ಟಿ.ಬಿ.ಎಫ್

✓ಪ್ರಿನ್ಸಿಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ –ಚಿತ್ರದುರ್ಗ, ಜಮಖಂಡಿ, ಬೆಳಗಾವಿ, ಮಂಗಳೂರು, ಗುಲ್ಬರ್ಗಾ, ಮೈಸೂರು.

✓ಶಿಕ್ಷಣ ವಾರ್ತೆ

**ಪ್ರತಿಯನ್ನು ಗೌರವಗಳೊಂದಿಗೆ**

✓ ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ ಇವರಿಗೆ .

✓ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು.